<u>ಸಿಸಿ ಸಂಖ್ಯೆ: **-545/2022**</u> <u>ಪಿ.ಡಬ್ಲ್ಯೂ.:**-1**</u>

ದಿನಾಂಕಃ **08-01-2025** ರಂದು ಸಾಕ್ಷಿಯು ನ್ಯಾಯಾಲಯಕ್ಕೆ ಹಾಜರಾಗಿದ್ದು ಪ್ರಮಾಣ ವಚನ ಬೋಧಿಸಲಾಯಿತು.

<u>ಪಾಟೀ ಸವಾಲು :- ಆರೋಪಿ ಪರ ವಕೀಲರಿಂದ :-</u>

ನಾನು ಈ ಹಿಂದೆ ಕುದುರೆಮುಖ ಮೈನ್ಸ್ ಇಲಾಖೆಯಲ್ಲಿ ಕೆಲಸ ಮಾಡುತ್ತಿದ್ದೆನು. 2012 ರಲ್ಲಿ ನಿವೃತ್ತಿಗೊಂಡು ಈಗ ವ್ಯವಸಾಯ ಮಾಡುತ್ತಿದ್ದೇನೆ. ನಾನು ಚೀಲೂರು ಗ್ರಾಮದ ವಾಸಿ. ನಾನು ಮೈನ್ಸ್ ಇಲಾಖೆಯಲ್ಲಿ ಕೆಲಸ ಮಾಡುತ್ತಿದ್ದಾಗ ನನಗೆ ತಿಂಗಳಿಗೆ 50 ಸಾವಿರ ರೂಪಾಯಿ ಸಂಬಳ ಬರುತ್ತಿತ್ತು. ನನ್ನ ಸಂಬಳದಲ್ಲಿ ಕಡಿತಗೊಂಡು ರೂ.25,000/- ರಿಂದ 30,000/-ಗಳನ್ನು ಪಡೆದುಕೊಳ್ಳುತ್ತಿದ್ದೆನು. ಸದರಿ ಹಣದಲ್ಲಿ ಕೌಟುಂಬಿಕ ಖರ್ಚು ವೆಚ್ಚಗಳನ್ನು ತೆಗೆದು ನಿರ್ದಿಷ್ಟವಾಗಿ ಎಷ್ಟು ಹಣ ಉಳಿಯುತ್ತಿತ್ತು ಎಂದು ನಿಖರವಾಗಿ ಹೇಳಲು ಆಗುವುದಿಲ್ಲ. ನನಗೆ ಬರುವ ಸಂಬಳದಲ್ಲಿ ಸಂಪೂರ್ಣವಾಗಿ ಮನೆಯ ಖರ್ಚು ವೆಚ್ಚಗಳಿಗೆ ಮತ್ತು ಮಕ್ಕಳ ವಿದ್ಯಾಭ್ಯಾಸಕ್ಕೆ ಸರಿ ಹೋಗುತ್ತಿತ್ತು ಎಂದರೆ ಸರಿ. ನಾನು ನಿವೃತ್ತನಾದಾಗ ನನಗೆ ಅಂದಾಜು ರೂ.16,00,000/- ನಿವೃತ್ತಿ ಹಣವನ್ನು ಪಡೆದುಕೊಂಡಿರುತ್ತೇನೆ. ಅದರಲ್ಲಿ ರೂ.12,00,000/- ಹಣವನ್ನು ಬ್ಯಾಂಕ್ ನಲ್ಲಿ ಇಟ್ಟಿದ್ದೆನು. ಉಳಿದ ರೂ.4,00,000/- ಹಣದಲ್ಲಿ ನನ್ನ ಜಮೀನಿನಲ್ಲಿ ತೋಟವನ್ನು ಕಟ್ಟಿದ್ದೆನು. ನಾನು ಬ್ಯಾಂಕ್ ನಲ್ಲಿಟ್ಟಿದ್ದ ರೂ.12,00,000/- ಹಣದಲ್ಲಿ 2017 ನೇ ಸಾಲಿನಲ್ಲಿ ರೂ.5,00,000/- ಹಣವನ್ನು ಪಡೆದುಕೊಂಡು ಅದರಲ್ಲಿ ನನ್ನ ಮಗನ ಮದುವೆಯನ್ನು ಮಾಡಿರುತ್ತೇನೆ. ರೂ.4,00,000/- ಹಣವನ್ನು ಬ್ಯಾಂಕ್ ನಿಂದ ವಾಪಾಸ್ಸು ತೆಗೆದುಕೊಂಡು ಜಮೀನನ್ನು ಚೀಲೂರು ಗ್ರಾಮದಲ್ಲಿ ಖರೀದಿ ಮಾಡಿರುತ್ತೇನೆ. ಉಳಿದ ರೂ.3,00,000/- ಹಣವನ್ನು ಮನೆಯ ಖರ್ಚುಗಳಿಗೆ ಕೌಟುಂಬಿಕ ವ್ಯವಹಾರಗಳಿಗೆ ಖರ್ಚು ಮಾಡಿರುತ್ತೇನೆ.

ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶಕೋರಿದ್ದು, ನೀಡಿ ಮುಂದೂಡಲಾಯಿತು.

ಸಾ. ಹೇ. ತೆ. ನ್ಯಾ ಬೆ. ಮಾಡಿಸಲಾಯಿತು.

ಓ. ಹೇ. ಕೇ. ಸ. ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊನ್ನಾಳಿ.